ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1762
2) ಸದಸ್ಯರ ಹೆಸರು : ಡಾ|| ಉಮೇಶ್ ಜಿ ಜಾಧವ್,
3) ಉತ್ತರಿಸಬೇಕಾದ ದಿನಾಂಕ : 13.12.2018.
4) ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಕುಂಚಾವರಂ ಹಾಗೂ ಇತರ ಹೋಬಳಿಗಳ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದ್ದು, ನೀರಿನ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಬಂದಿದೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕಳೆದ 3 ವರ್ಷಗಳ ಅಂತರ್ಜಲ ಸ್ಥಿರಜಲಮಟ್ಟದ ವರದಿಯಂತೆ ಅಂತರ್ಜಲ ಮಟ್ಟವು ಕುಸಿತವನ್ನು ಕಂಡಿರುತ್ತದೆ.
2015 ಮತ್ತು 2017ರ ರ ಅಂತರ್ಜಲ ಮಟ್ಟದ ವ್ಯತ್ಯಾಸದಲ್ಲಿ 0.28 ಮೀ.ನಷ್ಟು ಕುಸಿತವು ಕಂಡುಬಂದಿರುತ್ತದೆ.
<table>
<tr><th>ತಾಲ್ಲೂಕು</th><th>2015</th><th>2016</th><th>2017</th><th>ಏರಿಕೆ</th><th>ಇಳಿಕೆ</th></tr>
<tr><td>ಚಿಂಚೋಳಿ</td><td>5.61</td><td>6.09</td><td>5.89</td><td></td><td>-0.28</td></tr>
</table>
</td></tr>
<tr><td>ಆ</td><td>ಹಾಗಿದ್ದಲ್ಲಿ, ಅಂತರ್ಜಲ ಅಭಿವೃದ್ಧಿಪಡಿಸಲು ಸುಜಲಾ ಅಥವಾ ಇತರೆ ಯೋಜನೆ ಯಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆ?</td><td>ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅಂತರ್ಜಲ ಅಭಿವೃದ್ಧಿ ಮತ್ತು ಸದ್ಬಳಕೆ ಕುರಿತು ತಾಲ್ಲೂಕು ಮಟ್ಟ / ಶಾಲಾ ಕಾಲೇಜುಗಳಲ್ಲಿ ಜನಜಾಗೃತಿ ಶಿಬಿರಗಳನ್ನು ಆಯೋಜಿಸುವ ಮೂಲಕ ಹಾಗೂ ಟಿ.ವಿ / ಮಾಧ್ಯಮಗಳಲ್ಲಿ ಪ್ರಚುರ ಪಡಿಸುವ ಮೂಲಕ, ಹೋರ್ಡಿಂಗ್ಸ್ ಅಳವಡಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕೃಷಿ ಇಲಾಖೆಯ ಕಲಬರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಮತ್ತು ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-III) ಯೋಜನೆಯನ್ನು ಅನುಷ್ಠಾನಗೊಳಿಸುವ ಮುಖಾಂತರ ಅಂತರ್ಜಲ ಮಟ್ಟ ಹೆಚ್ಚಿಸಲು ಮತ್ತು ಮಣ್ಣಿನ ಸವಕಳಿಯನ್ನು ತಪ್ಪಿಸಲು ಕ್ರಮವಹಿಸಲಾಗುತ್ತಿದೆಯೆಂದು ತಿಳಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)</td></tr>
</table>

ಸಂಖ್ಯೆ: ಸನೀಇ 127 ವಿಸವಿ 2018.

(ಸಿ.ಎಸ್ ಪುಟ್ಟರಾಜು)
ಸಣ್ಣ ನೀರಾವರಿ ಸಚಿವರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಡಾ|| ಉಮೇಶ್ ಜಿ ಜಾಧವ್ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 1762ಕ್ಕೆ ಅನುಬಂಧ

ಜಲಾನಯನ ಕಾರ್ಯಕ್ರಮದಡಿ ಕಲಬುರುಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕುಂಚಾವರಂ ಹಾಗೂ ಇತರ ಹೋಬಳಿಗಳಲ್ಲಿ ತೆಗೆದುಕೊಂಡ ಯೋಜನೆ ಮತ್ತು ಕಾಮಗಾರಿಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆ	ಕೈಗೆತ್ತಿಕೊಂಡ ಕಾಮಗಾರಿ ವಿವರ		ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ
		ಕಾಮಗಾರಿ ಹೆಸರು	ಕಾಮಗಾರಿಗಳ ಸಂಖ್ಯೆ/ಹೆಕ್ಟೇರ್			
1	2	3	4	5	6	7
1	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ	ಚೆಕ್‌ಡ್ಯಾಂ (ಸಂಖ್ಯೆ)	8	750.73	387.79	31.85
		ರಬಲ್/ಬೋಲ್ಡರ ತಡೆ (ಆರ್.ಎಮ್.ಟಿ)	547			6.00
		ಚೆಕ್‌ಡ್ಯಾಂ (ಸಂಖ್ಯೆ)	14			58.83
2	ಸುಜಲಾ-3	ಕ್ಷೇತ್ರಬದು (ಹೇ.)	248	1158.00	573.06	19.88
		ಕೃಷಿಹೊಂಡ (ಸಂಖ್ಯೆ)	67			57.71
		ಚೆಕ್‌ಡ್ಯಾಂ (ಸಂಖ್ಯೆ)	25			104.78
		ಗೋಕಟ್ಟೆ (ಸಂಖ್ಯೆ)	5			11.31
		ರೆವೈನ್ ರೆಕ್ಲೇಮೇಷನ್ ಸ್ಟ್ರಕ್ಚರ್ (ಸಂಖ್ಯೆ)	4			9.00
		ಕಂಟಿನಿವಸ್ ಕಾಂಟೂರ್ ಟ್ರೇಂಚಸ್ (ಹೇ.)	21			1.00
		ಸ್ಟ್ಯಾಗರ್ಡ ಟ್ರೇಂಚಸ್ (ಹೇ.)	25			1.00
		ಡೈವರ್ಸನ್ ಚಾನೆಲ್ (ಆರ್.ಎಮ್.ಟಿ)	12288			9.05
		ರಬಲ್/ಬೋಲ್ಡರ ತಡೆ (ಆರ್.ಎಮ್.ಟಿ)	1037			8.82
	ಒಟ್ಟು			1908.73	960.85	319.23

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 64 ಡಬ್ಲ್ಯೂಎಲ್ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

912
U/S
13/12/18

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 917ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 917ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ದಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,
12/12/18
(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ